ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದುಕೊರತೆಗಳ ರಾಜ್ಯ ಸಚಿವರು):- ಮಾನ್ಯ ಅಧ್ಯಕ್ಷರೆ, ಮಂಗಳೂರಿನ ಸಮೀಪದಲ್ಲಿರುವ ಉಲ್ಲಾಳ-ಸೋಮೇಶ್ವರ ಕಡಲ ತೀರಗಳು ಪ್ರಕೃತಿ ಸೌಂದರ್ಯದಿಂದ ಕೂಡಿದೆ. ಕ್ರಿ.ಶ. ೧೬೦೦ರಲ್ಲಿ ಪೋರ್ಚುಗೀಸರನ್ನು ಸೋಲಿಸಿದ ರಾಣಿ ಅಬ್ಬಕ್ಕ ಆಳಿದ ಸ್ಥಳ ಇದಾಗಿದೆ. ಉಲ್ಲಾಳರ ಸಯ್ಯದ್ ಮದನಿ ದರ್ಗಕ್ಕೆ ಹಾಗೂ ಸೋಮೇಶ್ವರದಲ್ಲಿರುವ ಪುರಾತನ ದೇವಾಲಯಕ್ಕೆ ಯಾತ್ರಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಇಲ್ಲಿನ ಸೊಬಗನ್ನು ಸವಿಯುತ್ತಾರೆ.

ಉಲ್ಲಾಳ-ಸೋಮೇಶ್ವರದ ಬಗ್ಗೆ ಪ್ರವಾಸಿಗರಿಗೆ ಮಾಹಿತಿ ಒದಗಿಸಲು, ಮಂಗಳೂರಿನಲ್ಲಿ ಪ್ರವಾಸಿ ಮಾಹಿತಿ ಕೇಂದ್ರವನ್ನು ಇಲಾಖೆ ತೆರೆದಿದೆಯಲ್ಲದೆ ಇಲಾಖೆ ಹೊರತಂದಿರುವ ಕರಾವಳಿ ಬಣ್ಣದ ಕಿರುಹೊತ್ತಿಗೆಯಲ್ಲಿ ಉಲ್ಲಾಳ-ಮತ್ತು ಸೋಮೇಶ್ವರದ ಬಗ್ಗೆ ಮಾಹಿತಿ ಒದಗಿಸಲಾಗಿದೆ.

ಪ್ರೇಕ್ಷಣೀಯ ಸ್ಥಳಗಳ ಅಭಿವೃದ್ಧಿಯಲ್ಲಿ ಖಾಸಗಿ ಉದ್ಯಮಿಗಳನ್ನು ತೊಡಗಿಸುವುದು ಸರ್ಕಾರದ ನೀತಿಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಈ ಪ್ರೇಕ್ಷಣೀಯ ಸ್ಥಳಗಳನ್ನು ಇತ್ತೀಚೆಗೆ ಘೋಷಿಸಲಾದ ಕರ್ನಾಟಕ ಪ್ರವಾಸೋದ್ಯಮ ನೀತಿಯಲ್ಲಿ 'ಸಿ' ಗುಂಪಿನಡಿಯಲ್ಲಿ ಸೇರಿಸಿದ್ದು ಇಲ್ಲಿ ಪ್ರವಾಸೋದ್ಯಮ ಯೋಜನೆಗಳನ್ನು ಕೈಗೊಳ್ಳಲು ಮುಂದೆ ಬರುವ ಖಾಸಗಿ ಉದ್ಯಮಿಗಳಿಗೆ ಬಂಡವಾಳ ಹೂಡಿಕೆ ಮೇಲೆ ಹೆಚ್ಚಿನ ಸಬ್ಸಿಡಿ, ರಿಯಾಯಿತಿ ಮತ್ತು ಉತ್ತೇಜನಗಳನ್ನು ನೀಡಲಾಗುವುದು.

೫) ವಿಷಯ:- ಕಬ್ಬಿಗೆ ಸಲಹಾ ಬೆಲೆಯನ್ನು ನಿಗದಿಪಡಿಸುವ ಬಗ್ಗೆ

ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):- ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದ ಬಹುತೇಕ ಸಕ್ಕರೆ ಕಾರ್ಖಾನೆಗಳು ಕಬ್ಬನ್ನು ಅರೆಯುವ ಕಾರ್ಯವನ್ನು ಸಮಾಪ್ತಿಗೊಳಿಸುವ ಹಂತದಲ್ಲಿದ್ದು, ೧೯೯೨-೯೩ನೇ ಸಾಲಿಗೆ ಇನ್ನೂ ಸಹ ರಾಜ್ಯ ಸರ್ಕಾರದ ಕನಿಷ್ಠ ಸಲಹಾ ಬೆಲೆಯು ರೈತರು ಬೆಳೆದ ಕಬ್ಬಿಗೆ ನಿಗದಿಯಾಗಿದೆ, ರೈತರ ಹಣ ಪಾವತಿಯ ಬಗ್ಗೆ ತುಂಬಾ ಸಮಸ್ಯೆಯಾಗಿದೆ. ರೈತರು ಈ ಬಗ್ಗೆ ತೀವ್ರ ಚಿಂತನೆಗೆ ಒಳಗಾಗಿದ್ದಾರೆ. ಆದ್ದರಿಂದ ರಾಜ್ಯ ಸರ್ಕಾರವು ತುರ್ತಾಗಿ ಕಬ್ಬಿಗೆ ಕನಿಷ್ಠ ಸಲಹಾ ಬೆಲೆಯನ್ನು ನಿಗದಿಪಡಿಸಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಬಿ.ಎಸ್. ಪಾಟೀಲ್ (ಸಕ್ಕರೆ ಸಚಿವರು):- ಮಾನ್ಯ ಅಧ್ಯಕ್ಷರೆ, ಭಾರತ ಸರ್ಕಾರವು ಪ್ರತಿ ವರ್ಷ ಶೇಕಡ ೮೫ರಷ್ಟು ರಿಕವರಿಗೆ ಅನುಗುಣವಾಗಿ ಕಬ್ಬಿನ ಬೆಳೆಯ ಶಾಸನ ಬದ್ಧ ಕನಿಷ್ಠ ದರವನ್ನು ಪ್ರಕಟಿಸುತ್ತದೆ. ಆದರೆ, ಈ ವರ್ಷ ಸ್ವಲ್ಪ ವಿಳಂಬವಾಗಿ ನಿನ್ನೆ ತಾನೇ ಭಾರತ ಸರ್ಕಾರವು ಶಾಸನಬದ್ಧ ಕನಿಷ್ಠ ದರವನ್ನು ೧೯೯೨-೯೩ನೇ ಸಾಲಿಗೆ ಹಾಗೂ ೧೯೯೩-೯೪ನೇ ಸಾಲಿಗೆ ಮತ್ತು ಸಕ್ಕರೆ ನೀತಿಯನ್ನು ಪ್ರಕಟಿಸಿದೆ.

ಈ ಮಧ್ಯೆ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ ೨೯-೧೨-೯೨ ರಂದು ೧೯೯೨-೯೩ನೇ ಸಾಲಿನ ಕಬ್ಬಿನ ಬೆಳೆಗೆ ರಾಜ್ಯ ಸಲಹಾ ದರವನ್ನು ನಿಗದಿಪಡಿಸಲು ಸಭೆಯನ್ನು ಜರುಗಿಸಲಾಯಿತು. ಕಬ್ಬು ಬೆಳೆಗಾರರ ಪ್ರತಿನಿಧಿಗಳು, ಸಕ್ಕರೆ ಕಾರ್ಖಾನೆಗಳ ಪ್ರತಿನಿಧಿಗಳು ಮತ್ತು ರಾಜ್ಯ ಸರ್ಕಾರದ ಅಧಿಕಾರಿಗಳು ಸದರಿ ಸಭೆಯಲ್ಲಿ ಭಾಗವಹಿಸಿದ್ದರು. ಮಾನ್ಯ ಮುಖ್ಯಮಂತ್ರಿಗಳ ಅಪೇಕ್ಷೆಯಂತೆ ಕಬ್ಬು ಬೆಳೆಗಾರರ ಪ್ರತಿನಿಧಿಗಳು ಸಕ್ಕರೆ ಕಾರ್ಖಾನೆಗಳ ಪ್ರತಿನಿಧಿಗಳು, ವಿಧಾನಸಭೆಯ ಸದಸ್ಯರುಗಳು ಮತ್ತು ಲೋಕಸಭಾ ಸದಸ್ಯರನ್ನೊಳಗೊಂಡಂತೆ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಒಂದು ಉಪ ಸಮಿತಿಯನ್ನು ರಚಿಸಲಾಯಿತು. ಸದರಿ ಉಪ ಸಮಿತಿಯ ಶಿಫಾರಸ್ಸುಗಳನ್ನು ಹಾಗೂ ಭಾರತ ಸರ್ಕಾರದ ಸಕ್ಕರೆ ನೀತಿಯನ್ನು ಮತ್ತು ಶಾಸನಬದ್ಧ ಕನಿಷ್ಠ ದರವನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಸರ್ಕಾರವು ಸದ್ಯದಲ್ಲಿಯೇ ೧೯೯೨-೯೩ನೇ ಸಾಲಿಗೆ ರಾಜ್ಯ ಸಲಹಾ ದರವನ್ನು ಪ್ರಕಟಿಸುವುದು.